**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನಸಭೆ**

**ಒಂಭತ್ತನೇ ಅಧಿವೇಶನ**

# ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 2016

## (2016ರ ವಿಧಾನಸಭೆಯ ವಿಧೇಯಕ ಸಂಖ್ಯೆ – 06)

ಕರ್ನಾಟಕ ಗಿರವಿದಾರರ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗಿರವಿದಾರರ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 13) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ಗಿರವಿದಾರರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 13) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 4ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದಲ್ಲಿನ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

(ii) (5)ನೇ ಉಪಪ್ರಕರಣದಲ್ಲಿ,-

(ಎ) (ಎ) ಖಂಡದಲ್ಲಿ "ಎರಡು ಸಾವಿರದ ಐದು ನೂರು ರೂಪಾಯಿಗಳು" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ಬಿ) ಖಂಡದಲ್ಲಿ "ಎರಡು ಸಾವಿರದ ಐದುನೂರು ರೂಪಾಯಿಗಳು" ಮತ್ತು "ಒಂದು ಸಾವಿರದ ಎರಡುನೂರ ಐವತ್ತು ರೂಪಾಯಿಗಳು" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳು" ಮತ್ತು "ಎರಡು ಸಾವಿರದ ಐದುನೂರು ರೂಪಾಯಿಗಳು" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಸಿ) ಪರಂತುಕದಲ್ಲಿ "ಮೇಲೆ ನಿರ್ದಿಷ್ಟಪಡಿಸಿದ ದರಗಳ ಎರಡು ಪಟ್ಟು ಫೀಜನ್ನು ಸೇರಿಸತಕ್ಕದ್ದು" ಎಂಬ ಪದಗಳಿಗೆ "ಮೇಲೆ ನಿರ್ದಿಷ್ಟಪಡಿಸಿದ ದರದ ಶೇಕಡಾ ಐವತ್ತರಷ್ಟು ಹೆಚ್ಚುವರಿ ಲೈಸೆನ್ಸ್ ಶುಲ್ಕವನ್ನು ಸೇರಿಸತಕ್ಕದ್ದು. ಆದಾಗ್ಯೂ, ಲೈಸನ್ಸಿನ ಅವಧಿ ಮುಕ್ತಾಯವಾದ ನಂತರ ತರುವಾಯ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ." ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**2. 4ಎ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 4ಎ ಪ್ರಕರಣದಲ್ಲಿನ ಮೊದಲನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**3. 11ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 11ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳಲ್ಲಿ "ಹತ್ತು ರೂಪಾಯಿಗಳನ್ನು" ಎಂಬ ಪದಗಳಿಗೆ "ಎರಡು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 12ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 12ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಹತ್ತು ರೂಪಾಯಿಗಳನ್ನು" ಎಂಬ ಪದಗಳಿಗೆ "ಎರಡು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಗಿರವಿದಾರರ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 13),–

(i) ಗಿರವಿಗಾಗಿ ಲೈಸೆನ್ಸ್ ನೀಡುವ ವಿಧಾನವನ್ನು ಸರಳಗೊಳಿಸುವುದಕ್ಕೆ ಮತ್ತು ಇಬ್ಬಗೆಯ (dual) ಲೈಸೆನ್ಸನ್ನು ತಪ್ಪಿಸುವುದಕ್ಕೆ;

(ii) ಪ್ರಸ್ತುತ ಹಣಮೌಲ್ಯದ ಪ್ರಕಾರ ಒತ್ತೆಯಿಟ್ಟ ಗಿರವಿ ಅಥವಾ ವಸ್ತುಗಳ ಹರಾಜಿಗಾಗಿ ಕನಿಷ್ಠ ಮೌಲ್ಯವನ್ನು ಪರಿಷ್ಕರಿಸುವುದಕ್ಕೆ;

–ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಹೆಚ್.ಎಸ್. ಮಹದೇವ ಪ್ರಸಾದ್**
ಸಹಕಾರ ಮತ್ತು ಸಕ್ಕರೆ ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ಗಿರವಿದಾರರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 13) ಉದ್ಧೃತ ಭಾಗ**

XXX XXX XXX

**4. ಲೈಸೆನ್ಸುಗಳ ಮಂಜೂರಾತಿ ಮತ್ತು ನವೀಕರಣ.–** XXX XXX XXX

(ಸಿ) ಅರ್ಜಿದಾರನು ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961ರ ಅಡಿಯಲ್ಲಿ ಲೈಸೆನ್ಸನ್ನು ಹೊಂದಿರದಿದ್ದರೆ.

XXX XXX XXX

(5) ಲೈಸೆನ್ಸಿನ ಮಂಜೂರಾತಿ ಅಥವಾ ನವೀಕರಣಕ್ಕಾಗಿನ ಪ್ರತಿಯೊಂದು ಅರ್ಜಿಯನ್ನು ಈ ಮುಂದಿನ ದರಗಳ ಫೀಜುಗಳೊಂದಿಗೆ ಸಲ್ಲಿಸತಕ್ಕದ್ದು:–

| | |
|---|---|
| (ಎ) ಒಂದಕ್ಕಿಂತ ಹೆಚ್ಚಲ್ಲದ ಸ್ಥಳದಲ್ಲಿ ವ್ಯವಹಾರವನ್ನು ನಡೆಸುತ್ತಿದ್ದಲ್ಲಿ. | ಎರಡು ಸಾವಿರದ ಐದುನೂರು ರೂಪಾಯಿಗಳು |
| (ಬಿ) ಒಂದಕ್ಕಿಂತ ಹೆಚ್ಚಿನ ಸ್ಥಳದಲ್ಲಿ ವ್ಯವಹಾರವನ್ನು ನಡೆಸುತ್ತಿದ್ದಲ್ಲಿ. | ಪ್ರಧಾನ ವ್ಯವಹಾರ ಸ್ಥಳಕ್ಕಾಗಿ ಎರಡು ಸಾವಿರ ಐದುನೂರು ರೂಪಾಯಿಗಳು ಮತ್ತು ಇತರ ಪ್ರತಿಯೊಂದು ಸ್ಥಳಗಳಿಗಾಗಿ ಒಂದು ಸಾವಿರದ ಎರಡುನೂರಾ ಐವತ್ತು ರೂಪಾಯಿಗಳು |

ಪರಂತು, ನಿಯಮಗಳ ಮೂಲಕ ನಿಯಮಿಸಿದ ಅವಧಿಯ ಮುಕ್ತಾಯದ ತರುವಾಯ ಅರ್ಜಿಯನ್ನು ಸಲ್ಲಿಸಿದರೆ ಅಂಥ ಅರ್ಜಿಗೆ ಸಂಬಂಧಿಸಿದಂತೆ ಮೇಲೆ ನಿರ್ದಿಷ್ಟಪಡಿಸಿದ ದರಗಳ ಎರಡು ಪಟ್ಟು ಫೀಜನ್ನು ಸೇರಿಸತಕ್ಕದ್ದು.

XXX XXX XXX

**4ಎ. ಲೈಸೆನ್ಸಿನ ಷರತ್ತುಗಳು.–** XXX XXX XXX

ಪರಂತು, ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 12) ಉಪಬಂಧಗಳ ಅಡಿಯಲ್ಲಿ ಲೈಸೆನ್ಸುದಾರನು ಮಾಡಿದ ಭದ್ರತಾ ಠೇವಣಿಯು ಈ ಅಧಿನಿಯಮದ ಉದ್ದೇಶಗಳಿಗಾಗಿಯೂ ಕೂಡ ಭದ್ರತಾ ಠೇವಣಿಯೆಂದು ಭಾವಿಸತಕ್ಕದ್ದು.

**11. ಒತ್ತೆಯ ವಿಮೋಚನೆ.–** XX XX XX

(2) ಹತ್ತು ರೂಪಾಯಿಗಳನ್ನು ಮೀರದ ಮೊತ್ತಕ್ಕಾಗಿ ಗಿರವಿ ಇಟ್ಟ ಒತ್ತೆಯನ್ನು, ವಿಮೋಚನೆಯ ಅವಧಿಯ ಮತ್ತು ರಿಯಾಯಿತಿ ನೀಡಿದ ದಿನಗಳ ಒಳಗಾಗಿ ವಿಮೋಚನೆ ಮಾಡದಿದ್ದರೆ, ಅದು ರಿಯಾಯಿತಿ ನೀಡಿದ ದಿನಗಳ ಕೊನೆಗೊಂಡ ನಂತರ ಗಿರವಿದಾರನ ನಿರುಪಾಧಿಕ ಸ್ವತ್ತಾಗತಕ್ಕದ್ದು.

(3) ಹತ್ತು ರೂಪಾಯಿಗಳನ್ನು ಮೀರಿದ ಮೊತ್ತಕ್ಕಾಗಿ ಗಿರವಿ ಇಟ್ಟ ಒತ್ತೆಯನ್ನು, ವಿಮೋಚನೆಯ ಅವಧಿ ಮತ್ತು ರಿಯಾಯಿತಿ ದಿನಗಳು ಕೊನೆಗೊಂಡಾಗ್ಯೂ, ಈ ಅಧಿನಿಯಮದಲ್ಲಿ ಉಪಬಂಧಿಸಲಾದಂತೆ ಅದನ್ನು ವಿಲೆ ಮಾಡುವವರೆಗೆ ವಿಮೋಚನೆಗೊಳಿಸಬೇಕಾದ ಅವಧಿಯು ಮತ್ತಷ್ಟು ಮುಂದುವರಿಯತಕ್ಕದ್ದು.

XXX XXX XXX

**12. ಒತ್ತೆಯ ಮಾರಾಟ ಮತ್ತು ಮಾರಾಟ ಪುಸ್ತಕದ ತಪಾಸಣೆ:–** (1) ಹತ್ತು ರೂಪಾಯಿಗಳನ್ನು ಮೀರಿದ ಮೊತ್ತಕ್ಕಾಗಿ ಗಿರವಿ ಇಟ್ಟಿರುವ ಒತ್ತೆಯನ್ನು ಗಿರವಿದಾರನ ಮೂಲಕ ವಿಲೇವಾರಿಯಾದಲ್ಲಿ ಹರಾಜಿನ ಮೂಲಕ ಮತ್ತು ಅನ್ಯಥಾ ಅಲ್ಲದೆ ಮಾರಾಟದ ಮೂಲಕ ವಿಲೇವಾರಿ ಮಾಡತಕ್ಕದ್ದು, ಮತ್ತು ನಿಯಮಿಸಬಹುದಾದಂಥ ನಿಯಮಗಳ ಅನುಸಾರವಾಗಿ ಮಾರಾಟವನ್ನು ನಿರ್ವಹಿಸತಕ್ಕದ್ದು.

XXX XXX XXX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ 1020, 1000–ಪ್ರತಿಗಳು 4ನೇ ಮಾರ್ಚ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**NINTH SESSION**

# THE KARNATAKA PAWN BROKERS (AMENDMENT) BILL, 2016.

**(L.A. Bill No. 06 of 2016)**

A Bill further to amend the Karnataka Pawn Brokers Act, 1961.

Whereas it is expedient further to amend the Karnataka Pawn Brokers Act, 1961. (Karnataka Act No 13 of 1962) for the purposes hereinafter appearing;

Be it enacted by the Karnataka State Legislature in the sixty seventh year of the Republic of India as follows:-

**1. Short title and commencement.**-(1) This Act may be called the Karnataka Pawn Brokers (Amendment) Act, 2016.

(2) It shall come into force at once.

**2. Amendment of section 4.**- In the Karnataka Pawn Brokers Act, 1961. (Karnataka Act No 13 of 1962) (hereinafter referred to as the principal Act), in section 4,-

(i) in sub-section (2), clause (c) shall be omitted.

(ii) in sub-section (5),-

(a) In clause (a), for the words "Rupees two thousand five hundred" the words "Rupees five thousand shall be substituted.

(b) In clause (b), for the words "Rupees two thousand five hundred" and "Rupees one thousand two hundred and fifty" the words "Rupees five thousand" and "Rupees two thousand five hundred" shall be substituted respectively.

(c) In the proviso, for the words "by a fee at double the rates specified above", the words "by an additional license fee at fifty percent of the rate specified above. However, application submitted after expiry of the Licence shall not be entertained" shall be substituted.

**3. Amendment of section 4-A.**- in section 4-A of the principal Act, the first proviso shall be omitted.

**4. Amendment of section 11.**- in section 11 of the principal Act, in sub-section (2) and (3) for the words "ten rupees" the words "two thousand rupees" shall be substituted.

**5. Amendment of section 12.**- in section 12 of the principal Act, in sub-section (1) for the words "ten rupees" the words "two thousand rupees" shall be substituted.

## *STATEMENT OF OBJECTS AND REASONS*

It is considered necessary to amend the Karnataka Pawn Brokers Act, 1961 (Karnataka Act No 13 of 1962) to,-

(i) simplify the licensing process for Pawn Broking and to avoid dual license.

(ii) revise the minimum value for auction of pledged pawn or articles according to present money value.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**H.S. MAHADEVA PRASAD**
Minister for Co-Operation and Sugar

**S. MURTHY**
Secretary (I/C)
Karnataka Legislative Assembly

***ANNEXURE***

**EXTRACT FROM THE KARNATAKA PAWN BROKERS ACT, 1961 (KARNATAKA ACT 13 OF 1962)**

**XX XX XX**

**4. Grant and renewal of licences.— XX XX XX**

(c) that the applicant does not hold a licence under the 1 [Karnataka]1 Moneylenders Act, 1961.

**XX XX XX**

(5) Every application for the grant or renewal of a licence, shall be accompanied by a fee at the following rates:—

| | |
|---|---|
| (a) if the place at which the business is to be carried on is not more than one. | Rupees two thousand five hundred. |
| (b) if the business is to be carried on at more than one place. | Rupees two thousand five hundred for the principal place of business and Rupees one thousand two hundred and fifty for each of the other places. |

Provided that where an application is made after the expiry of the period prescribed by rules in respect of such application, it shall be accompanied by a fee at double the rates specified above.

**XX XX XX**

**4A. Conditions of licence.— XX XX XX**

Provided that the security deposit made by a licensee under the provisions of the Karnataka Money Lenders Act, 1961 (Karnataka Act 12 of 1962) shall be deemed to be the security deposit for the purposes of this Act also.

**XX XX XX**

**11. Redemption of pledge.— XX XX XX**

(2) A pledge pawned for a sum not exceeding ten rupees, if not redeemed within the period of redemption and days of grace, shall at the end of the days of grace become the pawnbroker's absolute property.

(3) A pledge pawned for a sum exceeding ten rupees shall further continue to be redeemable until it is disposed of as provided in this Act, although the period of redemption and days of grace have expired.

**XX XX XX**

**12. Sale of pledge and inspection of sale book.—**(1) A pledge pawned for a sum exceeding ten rupees shall, when disposed of by the pawnbroker, be disposed of by sale by auction and not otherwise, and the sale shall be conducted in accordance with such rules as may be prescribed.

**XX XX XX**

Government Press, Vikasa Soudha, Bengaluru, P7, W.D., Copies 1020, 4th March, 2016